# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 03/2024

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಲಕ್ಷ್ಮಪ್ಪ | ಪ್ರಾಸಾಃ | 01 |
| **ತಂದೆಯ ಹೆಸರುಃ** | ಬೊಮ್ಮಪ್ಪ | ಚಾಸಾಃ | 01 |
| **ವಯಸ್ಸುಃ** | 52 | ಪ್ರಮಾಣ ವಚನ ಭೋದಿಸಿದ ದಿನಾಂಕ | 21.06.2025 |
| **ಉದ್ಯೋಗಃ** | ರೈತ | | |
| **ವಾಸ ಸ್ಥಳಃ** | ಬನದಾರಳಹಳ್ಳಿ | | |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಆರೋಪಿಗಳು ಗೊತ್ತು. ಅವರು ಪಕ್ಕದ ಜೇಡರ ಹಳ್ಳಿಯವರು. ದಿನಾಂಕ *30.01.2020* ರಲ್ಲಿ *3* ನೇ ಆರೋಪಿಯ ಮಗಳ ವಿಚಾರದಲ್ಲಿ ನನ್ನ ಮಗನ ಪರವಾಗಿ ಮಾತುಕತೆ ಆಡಲು *3* ನೇ ಆರೋಪಿ ಹಾಗೂ ಶ್ರೀನಿವಾಸ ರೆಡ್ಡಿ ರಾಚಾಪುರದ ಚಾಸಾ-*06* ಕೃಷ್ಣೆ ಗೌಡನ ಮನೆಯ ಬಳಿ ಬರಲು ಹೇಳಿದ್ದರು. ಸುಮಾರು ರಾತ್ರಿ *10.30* ಗಂಟೆಗೆ ನಾನು ಚಾಸಾ-*02* ಮತ್ತು ಚಾಸಾ-*03* ರವರೊಂದಿಗೆ ಚಾಸಾ-*06* ರವರ ಮನೆ ಬಳಿ ಹೋದೆವು. ಅಲ್ಲಿ ಅದಾಗಲೇ *01* ರಿಂದ *6* ಆರೋಪಿಗಳು ಹಾಜರಿದ್ದರು. ಎಲ್ಲರೂ ಗುಂಪು ಗೂಡಿ ಅವ್ಯಾಚ್ಯ ಶಬ್ಧಗಳಿಂದ ಬೈದು, *1* ನೇ ಆರೋಪಿ ಬೆನ್ನಿನಲ್ಲಿ ಒಂದು ಮಚ್ಚುನ್ನು ಇಟ್ಟುಕೊಂಡಿದ್ದು ಅದನ್ನು ಹೊರ ತೆಗೆದು ಚಾಸಾ-*2* ರ ವರ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿದಾಗ ಚಾಸಾ-*02* ತಪ್ಪಿಸಿಕೊಂಡಿದ್ದು ಆ ಏಟು ನನ್ನ ತಲೆಗೆ ಬಿದ್ದಿತು.

ಇದರಿಂದ ರಕ್ತ ಗಾಯವಾಗಿ ನನಗೆ ಪ್ರಜ್ಞೆ ಹೋಯಿತು. ಮಾರನೇಯ ಬೆಳಿಗ್ಗೆ ನನಗೆ ಪ್ರಜ್ಞೆ ಬಂದಾಗ ಚಿಂತಾಮಣಿ ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿ ಆಗಿದ್ದೆ. *2* ದಿನದ ನಂತರ ಕೋಲಾರದ ಎಸ್ ಎನ್ ಆರ್ ಆಸ್ಪತ್ರೆಗೆ ದಾಖಲಿಸಿದ್ದು. ಅಲ್ಲಿ *10* ದಿನ ಚಿಕಿತ್ಸೆ ಪಡೆದೆ. ಬೆಳಿಗ್ಗೆ *07.30* ಸುಮಾರಿಗೆ ಪೋಲಿಸರು ಚಿಂತಾಮಣಿ ಆಸ್ಪತ್ರೆಗೆ ಬಂದಿದ್ದು ಅಲ್ಲಿ ನನ್ನ ಹೇಳಿಕೆಯನ್ನು ನಿಪಿ-*01* ರಂತೆ ದಾಖಲಿಸಿದರು. ನಿಪಿ-*1(ಎ)* ನನ್ನ ಸಹಿ. ಅದೇ ಸಮಯಕ್ಕೆ ಪೋಲಿಸರು ನಾನು ಧರಿಸಿದ್ದ ರಕ್ತ ಸಿಕ್ತ ಶರ್ಟ್, ಸ್ವೆಟರ್ ಪಡೆದುಕೊಂಡರು. ಅದನ್ನು ಈಗ ನೋಡುತ್ತಿದ್ದು ಮು.ಮಾ.*01, 2* ಎಂದು ಗುರುತಿಸಲಾಗಿದೆ.

*1* ನೇ ಆರೋಪಿ ಹಲ್ಲೆ ಮಾಡಲು ಬಳಸಿದ ಮಚ್ಚನ್ನು ಈಗ ನೋಡುತ್ತಿದ್ದು ಅದನ್ನು ಮು.ಮಾ.*03* ಎಂದು ಗುರುತಿಸಲಾಯಿತು. ಮರು ಹೇಳಿಕೆ ನೀಡಿದ್ದೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಜೆ ಎ ಎಂ. ವಕೀಲರಿಂದ</u>**

ಶ್ರೀನಿವಾಸ ರೆಡ್ಡಿ ಸಂಜೆ 06.30 ಗಂಟೆಗೆ ಪೋನ್ ಮಾಡಿ ಕರೆದಿದ್ದರು. ಪೋನ್ ನಂ. ನೆನಪಿಲ್ಲ. ಆ ರೀತಿಯ ಯಾವುದೇ ಪೋನ್ ಕರೆ ಬಂದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿ. 29.01.2020 ರಂದು 3 ನೇ ಆರೋಪಿ ನನ್ನ ಮಗನ ವಿರುದ್ಧ ಆತನ ಮಗಳನ್ನು ಚುಡಾಯಿಸಿದ ಬಗ್ಗೆ ದೂರು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದು ಜೆ ಎಸ್ ಸಿ ನಂ. ಪಿ.ಒ.ಒ. 824800600069 ರಂತೆ ಎನ್ಸಿಆರ್ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

3 ನೇ ಆರೋಪಿಯ ಮಗಳಿಗೆ ಘಟನಾ ಸಮಯದಲ್ಲಿ 16 ವರ್ಷ ವಯಾಸ್ಸಾಗಿತ್ತು ಎಂದರೆ ಗೊತ್ತಿಲ್ಲ. 3 ನೇ ಆರೋಪಿ ನನ್ನ ಮಗನ ವಿರುದ್ಧ ಪೊಕ್ಸೊ

ಪ್ರಕರಣ ದಾಖಲಿಸಬಹುದೆಂಬ ಭಯದಿಂದ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಇದೇ ಘಟನೆಯ ಸಂಬಂಧ ನನ್ನ ಮಗ 3 ನೇ ಆರೋಪಿಯ ರವರ ಮಗಳು ಮತ್ತು ಹೆಂಡತಿಯ ಮೇಲೆ ದೌರ್ಜನ್ಯ ಮಾಡಿದ ಬಗ್ಗೆ ಸಿಸಿ.ನಂ.588/2020 ರಲ್ಲಿ ಪ್ರಕರಣ ದಾಖಲಾಗಿ ನಡೆಯುತ್ತಿದೆ ಎಂದರೆ ಸರಿ. ವೈದ್ಯರ ಮುಂದೆ ನಾನು ಹಲ್ಲೆ ಮಾಡಿದ ವ್ಯಕ್ತಿಯ ಹೆಸರು ಹೇಳಿರುವುದಿಲ್ಲ. 1 ನೇ ಆರೋಪಿ ನನ್ನ ಮೇಲೆ ಹಲ್ಲೆಯನ್ನೇ ಮಾಡದ ಕಾರಣ ಆತನ ಹೆಸರನ್ನು ವೈದ್ಯರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಗಾಯದ ಪ್ರಮಾಣ ಪತ್ರದಲ್ಲಿ ಹಲ್ಲೆ ಮಾಡಿದವರ ಹೆಸರು ಇಲ್ಲ ಎಂದರೆ ಸರಿಯಲ್ಲ.

ಮು.ಮಾ.03 ಮಚ್ಚು ಅಲ್ಲ. ಅದು ಹುಲ್ಲು ಕತ್ತರಿಸುವ ಹಾರೆ ಎಂದರೆ ಸರಿಯಲ್ಲ. ಮು.ಮಾ.03 ರಿಂದ ಹಲ್ಲೆ ಮಾಡಿದಲ್ಲಿ ತಲೆಯ ಮೇಲೆ ತೀವ್ರ ತರವಾದ ಗಾಯವಾಗುತ್ತದೆ, ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿದ 5 ಗುಣಿಸು ಅರ್ಧ ಸೆಂ .ಮೀ. ಗಾಯವಾಗುವ ಸಾಧ್ಯತೆಯೇ ಇಲ್ಲ ಎಂದರೆ ಸರಿಯಲ್ಲ. ನಾನು ಜಾರಿಬಿದ್ದು ಪೆಟ್ಟು ಮಾಡಿಕೊಂಡಿದ್ದು ನನ್ನ ಮಗನ ಮೇಲೆ ಪೊಕ್ಸೊ ಪ್ರಕರಣ ದಾಖಲಾಗಬಹುದೆಂಬ ಭಯದಿಂದ ಅದರ ದುರ್ಲಾಭ ಪಡೆದು ಸುಳ್ಳು ದೂರು ನೀಡಿದ್ದೇನೆ ಎಂದೆರ ಸರಿಯಲ್ಲ. ನಾನು ಹೇಳಿದಂತೆ 1 ನೇ ಆರೋಪಿ ನನ್ನ ಮೆಲೆ ಯಾವುದೇ ಹಲ್ಲೆ ಮಾಡಿಲ್ಲ, ನನಗೆ ಯಾವುದೇ ಗಾಯಗಳಾಗಿಲ್ಲ, ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಮು.ಮಾ.01 ರಿಂದ 3 ನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಠಿಸಿ ನನ್ನ ಮಗನನ್ನು ಪೊಕ್ಸೊ ಪ್ರಕರಣದಿಂದ ರಕ್ಷಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ಯಾರು ನನ್ನ ಮೇಲೆ ಹಲ್ಲೆ ಮಾಡದೇ ಇದ್ದರೂ 3 ನೇ ಆರೋಪಿಯ ಕುಟುಂಬದ ಎಲ್ಲರನ್ನು ವಿನಾ ಕಾರಣ ಈ ಕೇಸಿನಲ್ಲಿ ಸಿಲುಕಿಸಿ ಕಿರುಕುಳ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಈ ಘಟನೆಯಲ್ಲಿ ಯಾವುದೇ ಚಿಕಿತ್ಸೆ ಪಡೆದಿಲ್ಲ. ಈ ಘಟನೆ ನಡೆಯದೇ ಇರುವ ಕಾರಣ ಆತನಿಗೆ ಯಾವುದೇ ಗಾಯಗಳು ಆಗಿಲ್ಲ. ಹೀಗಾಗಿ ಆತ

ಯಾವುದೇ ಚಿಕಿತ್ಸೆ ಪಡೆದಿಲ್ಲ ಎಂದರೆ ಸ ರಿಯಲ್ಲ.

**<u>ಮರು ವಿಚಾರಣೆಃ ..... ಇಲ್ಲ .....</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)                    ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ 21.06.2025
ಸ್ಥಳಃ ಚಿಂತಾಮಣಿ

**(ಕೆ.ಎಂ.ರಾಜಶೇಖರ)**
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.